ಸಾಕ್ಷಿಯನ್ನು ದಿಃ 19.01.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು

**<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಃ</u>**

8. ನಾನು 3 ನೇ ತರಗತಿ ಓದುತ್ತಿದ್ದೇನೆ. ಶಾಲೆಯಲ್ಲಿ ಅ ಆ ಇ ಈ ಹೇಳಿಕೊಡುತ್ತಾರೆ. ನನಗೆ 8 ಪುಸ್ತಕಗಳು ಇರುತ್ತವೆ. ಕನ್ನಡದಲ್ಲಿ 3 ನೇ ಪಾಟ ಯಾವುದು ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಮ್ಮನಿರುತ್ತಾನೆ. ಶಾಲೆಯಲ್ಲಿ ಯಾವ ಸೆಕ್ಷನ್ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸುಮ್ಮನಿರುತ್ತಾನೆ. ನಿನ್ನ ಗೆಳೆಯರು ಯಾರು ಎನ್ನುವುದಕ್ಕೆ ಸಾಕ್ಷಿ ಸುಮ್ಮನಿರುತ್ತಾನೆ.

ನನ್ನ ಕ್ಲಾಸ್ ನಲ್ಲಿ 4 ನೇ ಬೆಂಚ್ ಇದೆ. ನಾನು ಮೊದಲ ಬೆಂಚ್ ನಲ್ಲಿ ಕೂತುಕೊಳ್ಳುತ್ತೇನೆ. 4 ನೇ ಬೆಂಚ್ ನಲ್ಲಿ ಯಾರು ಕೂತುಕೊಳ್ಳುತ್ತಾರೆ ಎಂದು ಗೊತ್ತಿಲ್ಲ.

9. ನ್ಯಾಯಾಲಯಕ್ಕೆ 5 ಸಲಿ ಬಂದಿರುತ್ತೇನೆ. ಈ ಕೊರ್ಟು ಬಿಟ್ಟರೆ ನಂಜನಗೂಡು ಕೊರ್ಟಿಗೆ ಹೋಗಿರುತ್ತೇನೆ. ಕೆಂಚ ಎನ್ನುವ ಮಾವ ನನಗೆ ಇದ್ದಾರೆ. ನನ್ನ ಮಾವ ಕೆಂಚ ಮತ್ತು ನನ್ನ ತಾತ ಪುಟ್ಟಸಿದ್ದಯ್ಯ ಈ ರೀತಿಯೇ ಹೇಳಬೇಕು ಎಂಬುದಾಗಿ ಹೇಳಿಕೊಟ್ಟಿದ್ದರು ಎನ್ನುವುದಕ್ಕೆ ಸಾಕ್ಷಿಯು 'ಹೂ' ಎಂಬುದಾಗಿ ಉತ್ತರ ನೀಡಿರುತ್ತಾನೆ.

10. ನನ್ನ ಅಪ್ಪನ ಹೆಸರು ರಾಜೇಶ. ನನ್ನ ಅಪ್ಪ ನನ್ನ ತಂಗಿಗೆ ಮತ್ತು ನನಗೆ ಚಾಕಲೇಟ್ ಬಿಸ್ಕೇಟ್ ಕೊಡಿಸುತ್ತಿದ್ದನು. ನನ್ನ ಅಮ್ಮನಿಗೆ ಸೀರೆ ಬಟ್ಟೆ ಮನೆಗೆ ಬೇಕಾದ ಸಾಮಾನು ಕೊಡಿಸುತ್ತಿದ್ದನು ಎನ್ನುವುದಕ್ಕೆ ಸಾಕ್ಷಿಯು 'ಹೂ' ಎಂಬುದಾಗಿ ಉತ್ತರ ನೀಡಿರುತ್ತಾನೆ. ನನ್ನ ಅಪ್ಪ ರಾಜೇಶ ದೇವಸ್ಥಾನಕ್ಕೆ ಮತ್ತು ಜಾತ್ರೆಗೆ ನನ್ನನ್ನು , ನನ್ನ ಅಮ್ಮನನ್ನು ಕರೆದುಕೊಂಡು ಹೋಗುತ್ತಿದ್ದನು ಎನ್ನುವುದಕ್ಕೆ ಸಾಕ್ಷಿಯು 'ಹೂ' ಎಂಬುದಾಗಿ ಉತ್ತರ ನೀಡಿರುತ್ತಾನೆ.

11. ನನ್ನ ಅಮ್ಮನ ಮೇಲೆ ನನ್ನ ಅಪ್ಪ ಯಾವತ್ತೂ ಗಲಾಟೆ ಮಾಡುತ್ತಿರಲಿಲ್ಲ ಎನ್ನುವುದಕ್ಕೆ ಇಲ್ಲ ಎಂದು ಹೇಳುತ್ತಾನೆ. ನಾನು , ನನ್ನ ತಂಗಿ , ನನ್ನ ಅಪ್ಪ , ನನ್ನ ಅಮ್ಮ ಒಂದೇ ಮನೆಯಲ್ಲಿ ಇರುತ್ತಿದ್ದೆವು. ನಂಜನಗೂಡಿನಲ್ಲಿ ನನ್ನ ಅಪ್ಪ ನನ್ನ ತಂಗಿಯನ್ನು ಕರೆದುಕೊಂಡು ಚಾಕಲೇಟ್ ಕೊಡಿಸಲು ಹೋಗಿದ್ದರು ಎಂರದೆ ಇಲ್ಲ ಎಂದು ಹೇಳುತ್ತಾನೆ. ನನ್ನ ಅಮ್ಮ ಹೊತೆಯ ಬಳಿ ಅಯ್ಯಪ್ಪಸ್ವಾಮಿ ದೇವಸ್ಥಾನಕ್ಕೆ ಹೋಗಿದ್ದಳು ಎನ್ನುವುದಕ್ಕೆ ಸಾಕ್ಷಿಯು 'ಹೂ' ಎಂಬುದಾಗಿ ಉತ್ತರ ನೀಡಿರುತ್ತಾನೆ. ನಾನು ದೇವಸ್ಥಾನಕ್ಕೆ ಕೈಯನ್ನು ಮುಗಿದಿರುವುದಿಲ್ಲ.

12. ನನ್ನ ಅಮ್ಮ ನನ್ನನ್ನು ಹೊಳೆಯ ಬಳಿ ಕರೆದುಕೊಂಡು ಹೋಗಿದ್ದಳು. ನನ್ನ ಅಮ್ಮ ನೀರಿನೊಳಗೆ ಆಟವಾಡಲು ನನ್ನನ್ನು ಕರೆದುಕೊಂಡು ಹೋಗಿರುತ್ತಾಳೆ. ನಾನು , ನನ್ನ ಅಮ್ಮ ನೀರಿನಲ್ಲಿ 4 ಗಂಟೆ ಆಟವಾಡಿರುತ್ತೇವೆ. ನನ್ನ ಅಮ್ಮನೇ ನೀರಿನಲ್ಲಿ ಆಟವಾಡುತ್ತಾ ಮುಳುಗಿಹೋದಳು ಎನ್ನುವುದು ಗೊತ್ತಿಲ್ಲ. ನೀನು ಸಹ ನೀರಿನಲ್ಲಿ ಮುಳುಗಿ ಹೋಗಿಬಿಟ್ಟೆ ಎನ್ನುವುದಕ್ಕೆ ಕಟ್ಟೆ ಮೇಲೆ ಕೂತಿದ್ದ ನನ್ನ ಅಮ್ಮನನ್ನು ನನ್ನ ಅಪ್ಪ ಎಸೆದುಬಿಟ್ಟನು. ಈ ರೀತಿಯಾಗಿ ನನ್ನ ಅಮ್ಮನನ್ನು ನನ್ನ ಅಪ್ಪ ಎಸೆದುಬಿಟ್ಟ ಅಂತ ಹೇಳು ಎಂಬುದಾಗಿ ನನ್ನ ತಾತ ನನಗೆ ಹೇಳಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

13. ನನ್ನ ಅಪ್ಪ ಒಳ್ಳೆಯವನು ಎಂದರೆ ಸರಿಯಲ್ಲ. ನನ್ನ ಅಮ್ಮನನ್ನು ನನ್ನ ಅಪ್ಪ ಹೊಳೆಗೆ ಎಸೆದಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ಅಪ್ಪ ಹೊಳೆಯ ಬಳಿ ಬಂದೇ ಇಲ್ಲ ಎಂದರೆ ಸರಿ.

<u>ಮರುವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ ಃ</u>

14. ನನ್ನನ್ನು ನೀರಿಗೆ ಮುಳುಗಿಸಿದ್ದು ರಾಜೇಶ. ನೀರಿನಿಂದ ನನ್ನನ್ನು ಮೇಲೆ ಎತ್ತಿದ್ದು ದೋಣಿಯವರು.

<u>ಮರುಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಃ</u>

15. ನಿನ್ನನ್ನು ನೀರಿಗೆ ಬೀಳಿಸಿದವರು ಯಾರು ಎನ್ನುವ ಪ್ರಶ್ನೆಗೆ ರಾಜೇಶ ಎಂಬುದಾಗಿ ಸಾಕ್ಷಿ ಉತ್ತರಿಸುತ್ತಾನೆ. ನನ್ನ ಮಾವ ಕೆಂಚ ಮತ್ತು ನನ್ನ ತಾತ ರಾಜೇಶನೇ ನನ್ನನ್ನು ನೀರಿಗೆ ಬೀಳಿಸಿದವನು ಎಂಬುದಾಗಿ ಹೇಳು ಎಂದು ಹೇಳಿಕೊಟ್ಟಿರುತ್ತಾರೆ ಎನ್ನುವುದಕ್ಕೆ ಸಾಕ್ಷಿಯು 'ಹೂ' ಎಂಬುದಾಗಿ ಉತ್ತರಿಸುತ್ತಾನೆ.

(ನನ್ನ ಉ ಮೇ ತೆ ನ್ಯಾ ಟೆ ಮಾಡಲಾಯಿತು)

ಓ ಹೇ ಕೇ ಸ ಇ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,

ಮೈಸೂರು